


# ಆರೋಗ್ಯ ಈಗ ಸ್ಮಾರ್ಟ್!

**ತಂತ್ರಜ್ಞಾನದ ಬೆಳವಣಿಗೆ ಆರೋಗ್ಯ ಕ್ಷೇತ್ರವನ್ನು ಈಗ ಸ್ಮಾರ್ಟ್ ಆಗಿಸಿದೆ. ಹೊಸ ಹೊಸ ವೈದ್ಯಕೀಯ ಉಪಕರಣಗಳು ರೋಗಿ ಶೀಘ್ರ ಗುಣಮುಖನಾಗಲು ಪೂರಕವಾಗಿವೆ.**

ಈಗ ಎಲ್ಲೆಡೆ ಡಿಜಿಟಲ್, ಸ್ಮಾರ್ಟ್, ಹೈಟೆಕ್ ಇವುಗಳೇ ಸದ್ದು ಮಾಡುತ್ತಿದ್ದು, ಜಗತ್ತೇ ತಂತ್ರಜ್ಞಾನದ ಮೊರೆ ಹೋಗಿದೆ. ಆರೋಗ್ಯ ಕ್ಷೇತ್ರವೂ ಇದರಿಂದ ಹೊರತಲ್ಲ. ವೈದ್ಯಕೀಯ ತಂತ್ರಜ್ಞಾನವೂ ಈಗ ಬಹಳಷ್ಟು ಮುಂದುವರಿದಿದೆ. ಇದು ಭವಿಷ್ಯದಲ್ಲಿ ಮತ್ತಷ್ಟು ಮುನ್ನಡೆ ಸಾಧಿಸಬಹುದು ಎಂಬ ಲೆಕ್ಕಾಚಾರ ವೈದ್ಯಕೀಯ ಲೋಕದ ತಜ್ಞರದ್ದು.

ಆರೋಗ್ಯ ತಂತ್ರಜ್ಞಾನ ಅಭಿವೃದ್ಧಿಪಥದತ್ತ ಸಾಗುತ್ತಿದ್ದಂತೆ ದೇಹದ ಕಾಯಿಲೆಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ. ಹಿಂದೆ ನಾವೆಂದೂ ಕಂಡು ಕೇಳರಿಯದ ವಿವಿಧ ರೀತಿಯ ಕಾಯಿಲೆಗಳು, ಚಿತ್ರವಿಚಿತ್ರ ವೈರಸ್‌ಗಳು, ಬ್ಯಾಕ್ಟೀರಿಯಾಗಳ ಉಪಟಳದಿಂದಾಗಿ ಜನ ತತ್ತರಿಸುತ್ತಿದ್ದಾರೆ. ದೇಹಕ್ಕೆ ಬರುವ ಕಾಯಿಲೆಗಳನ್ನು ತ್ವರಿತವಾಗಿ ಗುರುತಿಸಿ ನೀಡುವ ಔಷಧಗಳ ಭರಾಟೆ ಈಗೀಗ ಹೆಚ್ಚುತ್ತಿದೆ. ಯಾವುದೇ ಹೊಸ ಕಾಯಿಲೆ ಬಂದರೂ ತಕ್ಷಣವೇ ಆಮೂಲಾಗ್ರವಾಗಿ ಪತ್ತೆ ಹಚ್ಚಿ ಔಷಧೋಪಚಾರ ಮಾಡುವ ವ್ಯವಸ್ಥೆ ಈಗ ವೈದ್ಯರಂಗದಲ್ಲಿದೆ.

## ಡಿಜಿಟಲ್ ಡಯಾಗ್ನಾಸ್ಟಿಕ್ಸ್

ಇದು ವೈದ್ಯಕೀಯ ಜಗತ್ತಿಗೆ ಕಾಲಿಟ್ಟು ಹಲವು ವರ್ಷಗಳೇ ಕಳೆದಿವೆ. ಡಿಜಿಟಲ್ ಡಯಾಗ್ನಾಸ್ಟಿಕ್ಸ್‌ನಿಂದಾಗಿ ರೋಗದ ನಿಖರ ಮಾಹಿತಿ ಕೂಡಲೇ ಸಿಗುತ್ತಿದೆ. ಇದರಿಂದ ಕಾಯಿಲೆಗೆ ಔಷಧೋಪಚಾರ ಮಾಡುವುದು ಸುಲಭವಾಗಿದೆ. ಸ್ಮಾರ್ಟ್ ಆಸ್ಪತ್ರೆಗಳು, ಹೈಟೆಕ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ನಗರಗಳಲ್ಲಿ ಪೈಪೋಟಿ ನಡೆಸುತ್ತಿವೆ. ವೈದ್ಯರು ಮಾಡುವ ಕೆಲಸವನ್ನು ಯಂತ್ರ ಮಾಡುವ ಸಲುವಾಗಿಯೇ ರೋಬಾಟ್ ಬಂದಿದೆ. ಇದರ ಮೂಲಕ ನುರಿತ ವೈದ್ಯರ ಸಹಾಯದಿಂದ ಯಂತ್ರವೇ ಶಸ್ತ್ರಚಿಕಿತ್ಸೆ ನಡೆಸುತ್ತದೆ. ಹೃದಯವೂ ಸೇರಿದಂತೆ ಸೂಕ್ಷ್ಮ ಅಂಗಗಳ ಸರ್ಜರಿ ಇದರಿಂದ ಸಾಧ್ಯ. ಅಲ್ಲದೆ ಈ ಸುಲಭ ಶಸ್ತ್ರಚಿಕಿತ್ಸೆ ಆಸ್ಪತ್ರೆ ವಾಸದ ಅವಧಿಯನ್ನು ಕಡಿಮೆಗೊಳಿಸುತ್ತದೆ. ರೋಗಿ ಶೀಘ್ರ ಗುಣಮುಖನಾಗಿ ಮನೆಗೆ ತೆರಳಬಹುದು.

ವೈರಸ್, ಇವುಗಳ ರೂಪಾಂತರ ತಳಿ, ಬ್ಯಾಕ್ಟೀರಿಯಾಗಳು ಸೀಸನ್ ಆಧಾರಿತವಾಗಿ ದೇಹದ ಮೇಲೆ ದಾಳಿ ಇಡುತ್ತವೆ. ಇವುಗಳಿಗೆ ನೀಡುವ ಔಷಧಿಗಳು, ಆ್ಯಂಟಿ ಬಯೊಟಿಕ್‌ಗಳು ತ್ವರಿತವಾಗಿ ಲಭ್ಯವಾಗುತ್ತಿವೆ. ಹೃದಯ, ಮೆದುಳು, ಕಿಡ್ನಿ, ಕರುಳು, ಕಣ್ಣು, ಪಿತ್ತಜನಕಾಂಗ, ಶ್ವಾಸಕೋಶ... ಹೀಗೆ ದೇಹದ ಯಾವುದೇ ಅಂಗಕ್ಕೆ ತೊಂದರೆಯಾದರೂ ಆಯಾಯ ಅಂಗಕ್ಕೇ ಬೇಕಾದ 'ಬಿಡಿ ಬಿಡಿ'ಯಾದ ಅತ್ಯಾಧುನಿಕ ಚಿಕಿತ್ಸೆ ಇಂದು ಸಿಗುತ್ತಿದೆ.

## ಎಲ್ಲೆಡೆ ಸ್ಮಾರ್ಟ್ ಜಪ!

ಈಗ ಎಲ್ಲೆಡೆ ಕೇಳಿಬರುತ್ತಿರುವುದು, ಜಪಿಸುತ್ತಿರುವುದು ಸ್ಮಾರ್ಟ್ ಜಪ. ಸ್ಮಾರ್ಟ್‌ಫೋನ್, ಸ್ಮಾರ್ಟ್ ಟೀವಿ, ಸ್ಮಾರ್ಟ್ ಫ್ರಿಜ್... ಹೀಗೆ ಎಲ್ಲವೂ ಸ್ಮಾರ್ಟ್..! ಇದರ ಜೊತೆಗೆ ಆಸ್ಪತ್ರೆಗಳೂ ಸ್ಮಾರ್ಟ್, ಇದು ಸ್ಮಾರ್ಟ್ ಆಸ್ಪತ್ರೆಗಳ ಹೊಸ ಯುಗ. ಇದು ಡಿಜಿಟಲ್ ಆಸ್ಪತ್ರೆಗಳಾಗಿ ಬದಲಾಗಿದೆ. ಹಾಗಾದರೆ ಮುಂದೆ ವೈದ್ಯಕೀಯ ಲೋಕದ ಭವಿಷ್ಯ ಹೇಗಿರಬಹುದು ಎಂಬುದನ್ನು ತಿಳಿಯುವುದು ಕೂಡ ಕೌತುಕವೇ.

'ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಬದಲಾಗಿ ಸಂಪೂರ್ಣ ಹೋಮ್‌ಕೇರ್ ಬರಬಹುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬದಲಿಗೆ ಇ–ಕ್ಲಿನಿಕ್‌ಗಳು ಕಾರ್ಯ ನಿರ್ವಹಿಸುವ ಸಾಧ್ಯತೆ ಇದೆ. ಸ್ಮಾರ್ಟ್ ಡಿವೈಸ್‌ಗಳ ಮೂಲಕ ಹಾಗೂ ರೋಬಾಟ್ ಸರ್ಜರಿ ಮೂಲಕ ಆರೋಗ್ಯ ಸೇವೆ ಹಾಗೂ ನಿರ್ವಹಣೆಗೆ ಇನ್ನಷ್ಟು ಹೈಟೆಕ್ ಸ್ಪರ್ಶ ಸಿಗಲಿದೆ. ನಿಯಮಿತ ಆರೋಗ್ಯ ತಪಾಸಣೆಯ ಬದಲಾಗಿ ನಮ್ಮ ಜೀವಿತದ ಅವಧಿಯನ್ನು ನಿರ್ಧರಿಸುವ ಸರಳವಾದ ಚಿಕಿತ್ಸೆ ಬರಲಿದೆ...' ಎನ್ನುತ್ತಾರೆ ಬೆಂಗಳೂರಿನಲ್ಲಿ ಜನರಲ್ ಫಿಸೀಷಿಯನ್ ಡಾ. ವಿಶ್ವಾಸ್ ಹೆಗಡೆ.

'2030ರ ವೇಳೆಗೆ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗುತ್ತದೆ ಎಂದು ಭವಿಷ್ಯ ನುಡಿಯುವ ಅವರು, ಕಾಯಿಲೆಗೆ ಹೇಗೆ ವಯಸ್ಸಿನ ನಿರ್ಬಂಧವಿಲ್ಲದೆ ಕಾಡುತ್ತದೋ ಅದೇ ವೇಗದಲ್ಲಿ ಕಾಯಿಲೆಗೆ ಚಿಕಿತ್ಸೆಯೂ ಸಿಗಲಿದೆ' ಎನ್ನುತ್ತಾರೆ.

'ಇಂದು ವ್ಯಕ್ತಿಗೆ ಕಾಯಿಲೆ ಬರಲು ವಯಸ್ಸಿನ ನಿರ್ಬಂಧವಿಲ್ಲ. ಅದು ಹೃದ್ರೋಗವೇ ಆಗಿರಬಹುದು, ಮೆದುಳಿನ ಸಮಸ್ಯೆ, ಮಾನಸಿಕ ಕಾಯಿಲೆಗಳು, ಥೈರಾಯ್ಡ್ ಸಮಸ್ಯೆ, ಕಿಡ್ನಿ ತೊಂದರೆ, ತಲಸ್ಸೇಮಿಯಾ, ಅನೀಮಿಯಾಗಳಂತಹ ರಕ್ತದ ತೊಂದರೆಯಿಂದ ಬರುವ ಕಾಯಿಲೆಗಳು, ಅಷ್ಟೇ ಏಕೆ ಮಧುಮೇಹ, ರಕ್ತದೊತ್ತಡ, ಬೊಜ್ಜು, ಕೊಲೆಸ್ಟ್ರಾಲ್‌ಗಳಂತಹ ಜೀವನಶೈಲಿ ಕಾಯಿಲೆಗಳು ಇಂದು ಮಕ್ಕಳಿಂದ ಹಿಡಿದು ವೃದ್ಧರವರೆಗೂ ಎಲ್ಲ ವಯಸ್ಸಿನವರನ್ನೂ ಬಾಧಿಸುತ್ತಿವೆ, ಹೀಗಾಗಿ ಆಸ್ಪತ್ರೆಗಳೂ ಹೆಚ್ಚುತ್ತಿವೆ' ಎನ್ನುವುದು ಅವರ ಅಭಿಮತ.

ಮೆಡಿಕಲ್ ಸ್ಟೋರ್‌ಗಳು ಗಣನೀಯವಾಗಿ ಹೆಚ್ಚಿವೆ. ಮೊಬೈಲ್ ಆ್ಯಪ್ ಬಳಸಿ ಬೇಕಾದ ಔಷಧಿಗಳನ್ನು ಪಟ್ಟಿ ಮಾಡಿ ನೀಡಿದ ಕೆಲವೇ ಹೊತ್ತಿನಲ್ಲಿ ಮನೆಬಾಗಿಲಿಗೆ ಬಂದು ಬೀಳುವಷ್ಟು ತಂತ್ರಜ್ಞಾನ ಮುಂದುವರಿದಿದೆ.

ಏನೇ ಆದರೂ 'ನಮ್ಮ ಆರೋಗ್ಯ ನಮ್ಮ ಕೈಯಲ್ಲೇ' ಎಂಬ ಸಿದ್ಧಾಂತವನ್ನು ಪಾಲಿಸಿ ಶಿಸ್ತುಬದ್ಧ ಜೀವನಶೈಲಿ ರೂಢಿಸಿಕೊಂಡರೆ ಆಸ್ಪತ್ರೆ, ಔಷಧಿ, ಖರ್ಚು... ಎಲ್ಲದರಿಂದಲೂ ದೂರವಿರಬಹುದು.

■ **ಉಮಾ ವೇಣೂರು**